# ಅಂಶ 1 ಕನ್ನಡ ವರ್ಣಗಳು

**ವಿಷಯಕ್ರಮ**

1.0 ಉದ್ದೇಶ
1.1 ಪೀಠಿಕೆ
1.2 ವರ್ಣಮಾಲೆ
1.2.1 ಸ್ವರಗಳು
1.2.2 ಸಂಧ್ಯಕ್ಷರಗಳು
1.2.3 ವ್ಯಂಜನಗಳು
1.2.4 ವರ್ಗೀಯ ವ್ಯಂಜನಗಳು
**ಅಭ್ಯಾಸ - 1**
1.3 ಬರವಣಿಗೆ
**ಅಭ್ಯಾಸ - 2**
1.4 ಉಚ್ಚಾರಣೆ ಹಾಗೂ ಬರವಣಿಗೆ
**ಅಭ್ಯಾಸ - 3**
1.5 ಸಾರಾಂಶ
**ಅಭ್ಯಾಸಗಳಿಗೆ ಉತ್ತರಗಳು**

## 1.0 ಉದ್ದೇಶ

ಈ ಅಂಶವನ್ನು ಓದಿದ ಮೇಲೆ ನೀವು

- ದಿನಬಳಕೆಯಲ್ಲಿರುವ ಭಾಷೆಯಲ್ಲಿ ವರ್ಣಗಳನ್ನು ಗುರುತಿಸುತ್ತೀರಿ
- ಪದಗಳನ್ನು ತಪ್ಪಿಲ್ಲದಂತೆ ಉಚ್ಚರಿಸುತ್ತೀರಿ.
- ವರ್ಣಗಳಿಗೆ ಬಳಕೆಯ ಬಗ್ಗೆ ಉದಾಹರಣೆಗಳನ್ನು ಕೊಡಬಲ್ಲಿರಿ
- ತಪ್ಪಿಲ್ಲದಂತೆ ಕನ್ನಡವನ್ನು ಬರೆಯುತ್ತೀರಿ

## 1.1 ಪೀಠಿಕೆ

ಕನ್ನಡ ವರ್ಣಮಾಲೆಯನ್ನು ಅಂದರೆ 'ಅ' ದಿಂದ 'ಳ' ದವರೆಗೆ ಅಥವಾ ಕ್ಷ ತ್ರ ಜ್ಞ ದವರೆಗೆ, ಅಕ್ಷರಗಳನ್ನು ಪ್ರಾಥಮಿಕ ಶಾಲೆಯ ಮೊದಲ ವರ್ಷದಲ್ಲಿಯೇ ಕಲಿಸಲಾಗುತ್ತಿದೆ. ಇಲ್ಲಿ ಅದರ ಬಗೆಗೆ ಕಲಿಯಬೇಕಾದುದು ಇನ್ನೇನಿದೆ ಎಂಬ ಪ್ರಶ್ನೆ ಬರಬಹುದು. ಆದರೆ ಇಲ್ಲಿ ಕನ್ನಡ ವರ್ಣಮಾಲೆಯ ಬಗೆಗೆ ವಿಮರ್ಶಾತ್ಮಕ ಅಭ್ಯಾಸವನ್ನು ಮಾಡಿಸಲಾಗುತ್ತದೆ. ಇದರಿಂದ ಕನ್ನಡ ಭಾಷೆಯ ವರ್ಣಗಳ ಬಗ್ಗೆ ಶಾಸ್ತ್ರೀಯ ಅರಿವು ಉಂಟಾಗುವುದಲ್ಲದೆ ಭಾಷಾ ಪ್ರಯೋಗದ ಬಗೆಗೆ ಕೂಲಂಕಷ ದೃಷ್ಟಿ ಮೂಡುತ್ತದೆ. ಅಲ್ಲದೆ ಉಚ್ಚಾರದಲ್ಲಿ ಬರವಣಿಗೆಯಲ್ಲಿ ಸಾಮಾನ್ಯವಾಗಿ ಎಡವುವ ಸ್ಥಳಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಂಥ ಸ್ಥಳಗಳು ಬಂದಾಗ ಎಚ್ಚರಿಕೆ ವಹಿಸಲು ಅನುಕೂಲವಾಗುತ್ತದೆ. ತಮಗೆ ಅರಿವಿಲ್ಲದೆಯೇ ತಪ್ಪುಗಳು ನಡೆದು ಹೋಗುತ್ತವೆ ಎಂಬ ಅನುಭವ ಅನೇಕರಿಗೆ ಬರದಿರಲಿಕ್ಕೆ ಸಾಕು. ಭಾಷಾ ಶುದ್ಧಿಯ ಕಡೆಗೆ ಗಮನವಿಟ್ಟವರು ಇಂಥ ತಪ್ಪುಗಳ ಬಗೆಗೆ ಅರಿವನ್ನು ಹೊಂದಿರುವುದು ಅಗತ್ಯವೆನಿಸುತ್ತದೆ.

## 1.2 ವರ್ಣಮಾಲೆ

ಕನ್ನಡ ವರ್ಣಮಾಲೆಯನ್ನು ವಿಮರ್ಶಾತ್ಮಕವಾಗಿ ಅಭ್ಯಸಿಸೋಣ. ಕನ್ನಡ ವರ್ಣಮಾಲೆಯು ಭಾರತದ ಅನೇಕ ಭಾಷೆಗಳ ವರ್ಣಮಾಲೆಯಂತೆ ಸಂಸ್ಕೃತದ ವರ್ಣಮಾಲೆಯನ್ನು ಆಧರಿಸಿ ರಚಿತವಾಗಿದೆ:

ಅ ಆ ಇ ಈ ಉ ಊ ಋ (ೠ ಎ ಏ ಐ ಒ ಓ ಔ
ಇವು 14 ಸ್ವರಗಳು.
ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ
ಯ ರ ಲ ವ ಶ ಷ ಸ ಹ ಳ

ಇವು 34 ವ್ಯಂಜನಗಳು. ಅವುಗಳಲ್ಲಿ ಮೊದಲಿನ 25 ವ್ಯಂಜನಗಳು ಐದೈದರಂತೆ ಐದು ವರ್ಗಗಳಲ್ಲಿವೆ. ಆದುದರಿಂದ ಅವುಗಳಿಗೆ **ವರ್ಗೀಯ ವ್ಯಂಜನಗಳು** ಎಂಬ ಹೆಸರು. 'ಕ' ದಿಂದ ಪ್ರಾರಂಭವಾಗುವ ವರ್ಗಕ್ಕೆ ಕವರ್ಗ, 'ಚ' ದಿಂದ ಆರಂಭವಾಗುವ ವರ್ಗಕ್ಕೆ ಚವರ್ಗ; ಹೀಗೇ ಟವರ್ಗ, ತವರ್ಗ, ಪವರ್ಗ ಎಂದು ವರ್ಗೀಯ ವ್ಯಂಜನಗಳನ್ನು ಸಂಕೇತಿಸಲಾಗುತ್ತದೆ. ಉಳಿದ 9 ವ್ಯಂಜನಗಳು, ಅಂದರೆ 'ಯ' ದಿಂದ 'ಳ' ದವರೆಗೆ, **ಅವರ್ಗೀಯ ವ್ಯಂಜನಗಳು** ಎಂದೆನಿಸಿಕೊಳ್ಳುತ್ತವೆ. ಅವರ್ಗೀಯ ವ್ಯಂಜನಗಳೆಂದು ಇವುಗಳನ್ನು ಕರೆದಿದ್ದರೂ ವರ್ಗೀಯ ವ್ಯಂಜನಗಳಿಗಿರುವ ಉಚ್ಚಾರ ಸ್ಥಾನ ನಿರ್ದೇಶವನ್ನು ಇವುಗಳಿಗೂ ಮಾಡಲಾಗುತ್ತದೆ. ಈ ವಿಷಯವನ್ನು ಮುಂದೆ ನೋಡೋಣ. ಹೀಗೆ ಕನ್ನಡಕ್ಕೆ 14 ಸ್ವರಗಳು 34 ವ್ಯಂಜನಗಳು. ಒಟ್ಟು 48 ವರ್ಣಗಳು ಏರ್ಪಟ್ಟಿವೆ. ಇವಲ್ಲದೆ '**ಅನುಸ್ವಾರ**' (ಂ) ವಿಸರ್ಗ (ಃ) ಎಂಬ ಎರಡು ಅಕ್ಷರಗಳು ಇನ್ನೊಂದು ಅಕ್ಷರದೊಡನೆಯೇ ಬರುವಂಥವು ಇವೆ. ಇವು ಸ್ವತಂತ್ರವಾಗಿ ಬರುವುದಿಲ್ಲವಾದುದರಿಂದ ಇವುಗಳಿಗೆ **ಯೋಗವಾಹ** ಎಂಬ ಹೆಸರು. ಅನುಸ್ವಾರ, ವಿಸರ್ಗಗಳನ್ನು ಬರೆಯುವ ನಿಯಮಗಳನ್ನು ಬರವಣಿಗೆಯ ಚರ್ಚೆಯಲ್ಲಿ ವಿಸ್ತಾರವಾಗಿ ಮಾಡಲಾಗುತ್ತದೆ.

### 1.2.1 ಸ್ವರಗಳು

'ಅ' ದಿಂದ 'ಔ' ದವರೆಗೆ ಹದಿನಾಲ್ಕು ಸ್ವರಗಳು ಎಂದು ಹಿಂದೆ ನೋಡಿದೆವು. ಸ್ವರಗಳ ಉಚ್ಚಾರದಲ್ಲಿ ಯಾವ ರೀತಿಯ ಆತಂಕ ಬಾಯಲ್ಲಿ ಇರುವುದಿಲ್ಲ. ಇವು ಸ್ವತಂತ್ರವಾಗಿ ಉಚ್ಚಾರಗೊಳ್ಳುತ್ತವೆ. ಅವುಗಳಲ್ಲಿ 'ಐ' ಮತ್ತು 'ಔ' ಗಳನ್ನುಳಿದು ಎಲ್ಲ ಸ್ವರಗಳೂ ಎರಡೆರಡಂತೆ ಗುಂಪಾಗಿ ಬರುತ್ತವೆ. ಅಂದರೆ ಅ, ಆ ಒಂದು ಗುಂಪು, ಇ, ಈ ಇನ್ನೊಂದು, ಉ, ಊ ಮೂರನೆಯದು, ೠ ಎ,ಏ, ಒ, ಓ ಗಳು ನಾಲ್ಕು, ಐದು, ಆರನೆಯವು. ಈ ಪ್ರತಿಯೊಂದು ಗುಂಪುಗಳಲ್ಲಿಯ ಸ್ವರಗಳಲ್ಲಿ ಒಂದನೆಯದು ಸ್ವಲ್ಪ ಕಾಲ ಉಚ್ಚರಿಸುವಂಥದಾದರೆ ಎರಡನೆಯದು ಹೆಚ್ಚು ಕಾಲ ಉಚ್ಚರಿಸುವಂಥದು. ಈ ಲಕ್ಷಣದ ಮೇಲಿಂದ ಒನದನೆಯದನ್ನು ಹ್ರಸ್ವಸ್ವರ ಎಂತಲೂ ಎರಡನೆಯದನ್ನು ದೀರ್ಘಸ್ವರ ಎಂತಲೂ ವಾವ್ಯಕರಣಕಾರರು ಸಂಕೇತಿಸಿರುತ್ತಾರೆ. ಅ, ಇ, ಉ, ಋ, ಎ, ಒ ಗಳು ಹ್ರಸ್ವಸ್ವರಗಳಾದರೆ ಆ, ಈ, ಊ, ೠ, ಏ, ಓ ಗಳು ದೀರ್ಘಸ್ವರಗಳು. ಕನ್ನಡದಲ್ಲಿ ಹ್ರಸ್ವಸ್ವರಕ್ಕೂ ದೀರ್ಘಸ್ವರಕ್ಕೂ ಅರ್ಥಪೂರ್ಣ ಅಂತರವಿದೆ. ಉದಾಹರಣೆಗೆ

| | |
|---|---|
| ಅಲೆ | ಆಲೆ |
| ಕಿಡಿ | ಕೀಡಿ |
| ಉರಿ | ಊರಿ |
| ಕೆಡು | ಕೇಡು |
| ಕೊಡು | ಕೋಡು |

(ೠ ಗಳು ಈ ರೀತಿಯಲ್ಲಿ ದೊರೆಯುವುದಿಲ್ಲ. ಏಕೆಂದರೆ ಋ ಸಂಸ್ಕೃತ ಪದಗಳ ಸಂಧಿಯಲ್ಲಿ ಮಾತ್ರ ದೊರೆಯುತ್ತದೆ).

ಇವುಗಳನ್ನು ಗಮನಿಸಿರಿ. ಹ್ರಸ್ವಸ್ವರದ ಬದಲು ದೀರ್ಘಸ್ವರ ಬಂದರೆ ಅರ್ಥವೇ ಬದಲಾಗಿಬಿಡುತ್ತದೆ. ಇಂಥ ವ್ಯತ್ಯಾಸಗಳಾದರೆ ನಾವು ಹೇಳಬೇಕೆಂದಿರುವ ಅಭಿಪ್ರಾಯವೇ ಬದಲಾಗಿ ಹೋಗುತ್ತದೆ. ಆದುದರಿಂದ ಹ್ರಸ್ವ-ದೀರ್ಘ ಸ್ವರಗಳ ಬಗೆಗೆ ಖಚಿತವಾಗಿ ತಿಳಿದುಕೊಂಡು ತಪ್ಪಿಲ್ಲದಂತೆ ಉಚ್ಚರಿಸಿ, ಒಂದು ಶಬ್ದ ಇನ್ನೊಂದಾಗದಂತೆ ಬರೆಯುವುದು ಅತಿ ಮಹತ್ವದ ಕೆಲಸ. ಈ ರೀತಿಯ ವ್ಯತ್ಯಾಸ ಮಾಡಿದಾಗ ಪ್ರತಿಯೊಂದು ಶಬ್ದವೂ ಇನ್ನೊಂದು ಅರ್ಥ ಕೊಡದೇ ಇರಬಹುದು. ಆದರೆ ಶಬ್ದಗಳನ್ನು ರೂಪಾಂತರಗೊಳಿಸುವುದು ಅಂದರೆ ಸರಸ್ವತಿಯ ಮೂಗು ಕೊಯ್ದಂತೆ.

### 1.2.2 ಸಂಧ್ಯಕ್ಷರಗಳು

ಸಂಧ್ಯಕ್ಷರಗಳು ಎಂದರೆ ಎರಡು ಸ್ವರಗಳ ಸಮ್ಮಿಳನದಿಂದ ಹುಟ್ಟಿದವುಗಳು ಎಂದು ಅರ್ಥ. ಮೇಲೆ ವಿವರಿಸಿದ ಸ್ವರಗಳಲ್ಲಿ ನಾಲಗೆ ಮತ್ತು ತುಟಿಗಳು ಉಚ್ಚಾರ ಕಾಲದಲ್ಲಿ ಒಂದೇ ರೀತಿ ಉಳಿಯುತ್ತವೆ. ಆದರೆ ಸಂಧ್ಯಕ್ಷರಗಳಲ್ಲಿ ಒಂದು ಸ್ವರದಲ್ಲಿ ಪ್ರಾರಂಭವಾದ ಉಚ್ಚಾರ ಇನ್ನೊಂದು ಸ್ವರದಲ್ಲಿ ಪರ್ಯವಸಾನಗೊಳ್ಳುತ್ತದೆ. ಉದಾಹರಣೆಗೆ 'ಐ' ಅನ್ನುವಾಗ, ಅ ದಿಂದ ಪ್ರಾರಂಭವಾದ ಉಚ್ಚಾರ 'ಇ' ದಲ್ಲಿ ಪರ್ಯವಸಾನಗೊಳ್ಳುತ್ತದೆ. ಅದೇ ರೀತಿ 'ಔ' ಅನ್ನುವಾಗ 'ಅ' ಎಂದ ಪ್ರಾರಂಭವಾದ ಉಚ್ಚಾರ 'ಉ' ದಲ್ಲಿ ಪರ್ಯವಸಾನಗೊಳ್ಳುತ್ತದೆ. ಎರಡು ಅಕ್ಷರಗಳನ್ನು ಇವು ಒಳಗೊಳ್ಳುವುದರಿಂದ ಇವುಗಳಿಗೆ ಸಂಧಿ ಅಕ್ಷರ — ಸಂಧ್ಯಕ್ಷರ ಎಂಬ ಹೆಸರಾಗಿದೆ. ಸಂಧ್ಯಕ್ಷರಗಳು ದೀರ್ಘ ಅಕ್ಷರಗಳಂತೆಯೇ ನಡೆದುಕೊಳ್ಳುತ್ತವೆ. ಉದಾಹರಣೆಗೆ ಐಶ್ವರ್ಯ ಶಬ್ದದ ಉಚ್ಚಾರ ಅಯಿಶ್ವರ್ಯ ಎಂದಂತೆಯೇ ಇರುತ್ತದೆ; ಔಷಧಿ ಶಬ್ದವು ಅವುಷದಿ ಎಂದಂತೆಯೇ ಇರುತ್ತದೆ. ಆದರೂ ಇಂಥ ಶಬ್ದಗಳನ್ನು ಬರೆಯುವಾಗ ಸಂಧ್ಯಕ್ಷರಗಳನ್ನೇ ಉಪಯೋಗಿಸಿ ಬರೆಯುವುದು ಬಹುಕಾಲದಿಂದ ನಡೆದು ಬಂದ ಪದ್ಧತಿಯಾಗಿದೆ.

### 1.2.3 ವ್ಯಂಜನಗಳು

ಕನ್ನಡದಲ್ಲಿ ಒಟ್ಟು 34 ವ್ಯಂಜನಗಳು ಇವೆ, ಎಂಬುದನ್ನು ಹಿಂದೆ ನೋಡಿದ್ದೇವೆ. ಸ್ವರಗಳಂತೆ ಇವು ಸ್ವತಂತ್ರವಾಗಿ ಉಚ್ಚಾರಗೊಳ್ಳುವುದಿಲ್ಲ. ಅಂದರೆ ಇವುಗಳಿಗೆ ಸ್ವರದ ಸಹಾಯ ಬೇಕಾಗುತ್ತದೆ.
ವ್ಯಂಜನಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಬಹುದು.
(1) ವರ್ಗೀಯ ವ್ಯಂಜನ (2) ಅವರ್ಗೀಯ ವ್ಯಂಜನ. ಇವನ್ನು ಒಂದೊಂದಾಗಿ ನೋಡೋಣ.

### 1.2.4 ವರ್ಗೀಯ ವ್ಯಂಜನಗಳು

ವ್ಯಂಜನಗಳನ್ನು ಕವರ್ಗದಿಂದ ಪವರ್ಗದವರೆಗೆ ವರ್ಗೀಯ ವ್ಯಂಜನಗಳೆಂದೂ, ಯ ದಿಂದ ಳ ವರೆಗೆ ಅವರ್ಗೀಯ ವ್ಯಂಜನಗಳೆಂದೂ ವಿಭಾಗಿಸಿದುದನ್ನೂ ಹಿಂದೆ ನೋಡಿದ್ದೇವೆ. ಹೀಗೆ ವರ್ಗಗಳಾಗಿ ವಿಭಾಗಿಸುವುದಕ್ಕೆ ಶಾಸ್ತ್ರೀಯ ಆಧಾರ ಇದೆ. ವರ್ಣಗಳು ಉಚ್ಚಾರವಾಗುವ ಸ್ಥಳಗಳನ್ನು ಆಧರಿಸಿ ಹೆಸರುಗಳನ್ನು ಕೊಡಲಾಗಿದೆ. — ಕವರ್ಗವು ಕಂಠದಲ್ಲಿ ಹುಟ್ಟುವುದರಿಂದ ಅದು **ಕಂಠ್ಯ** ಚವರ್ಗವು ತಾಲುವಿನಲ್ಲಿ (ಅಂಗುಳಲ್ಲಿ) ಹುಟ್ಟುವುದರಿಂದ **ತಾಲವ್ಯ** ಇದೇ ರೀತಿ ಟವರ್ಗವು ಬಾಯ ಮೇಲ್ಭಾಗದಲ್ಲಿ ಹುಟ್ಟುವುದರಿಂದ **ಮೂರ್ಧನ್ಯ**, ತವರ್ಗವು ಹಲ್ಲು, ವಸಡಗಳ ಮಧ್ಯೆ ಹುಟ್ಟುವುದರಿಂದ **ದಂತ್ಯ** ಪವರ್ಗವು ತುಟಿಗಳಲ್ಲಿ ಹುಟ್ಟುವುದರಿಂದ **ಓಷ್ಠ್ಯ** ಅವರ್ಗೀಯ ವ್ಯಂಜನಗಳಲ್ಲಿ 'ಹ' ವು ಕಂಠ್ಯ ಯ,ಶ ಗಳು ತಾಲವ್ಯ ರ, ಷ ಗಳು ಮೂರ್ಧನ್ಯ ಲ, ಸ ಗಳು ದಂತ್ಯ ವ, ವು ಓಷ್ಠ್ಯ ಹೀಗೆ ಗುರುತಿಸಲಾಗಿದೆ. ಆದರೆ ಇವುಗಳ ಉಚ್ಚಾರ ವಿಧಾನದಲ್ಲಿ ಏಕರೂಪತೆ ಇಲ್ಲ. ಆದುದರಿಂದ ಇವನ್ನು ವರ್ಗೀಯ ವ್ಯಂಜನಗಳಲ್ಲಿ ಸೇರಿಸಿಲ್ಲ. ವ್ಯಂಜನಗಳ ಉಚ್ಚಾರದಲ್ಲಿ ಬಾಯಲ್ಲಿ ಯಾವುದಾದರೂ ಒಂದು ವಿಧದ ಅಡ್ಡಿ ಉಂಟಾಗುತ್ತದೆ. ಅಲ್ಲದೆ ಇವನ್ನು ಸ್ವರಗಳ ಸಹಾಯವಿಲ್ಲದೆ ಉಚ್ಚರಿಸಲು ಸಾಧ್ಯವಾಗುವುದಿಲ್ಲ. 'ಕ' ಎಂದಾಗ ವ್ಯಂಜನ ಕ್ ದ ನಂತರ 'ಅ' ಸ್ವರ ಬರುತ್ತದೆ. 'ಅ' ಸ್ವರವಿಲ್ಲದೆ ಕೇವಲ ವ್ಯಂಜನ ಕ್ ನ್ನು ಉಚ್ಚರಿಸಲು ಸಾಧ್ಯವಿಲ್ಲ. ವರ್ಗೀಯ ವ್ಯಂಜನಗಳಲ್ಲಿ 1 ನೆಯ ಮತ್ತು 2 ನೆಯವುಗಳನ್ನು **ಕರ್ಕಶ** ವರ್ಣ, **ಪರುಷ** ವರ್ಣ, ಅಥವಾ **ಅಘೋಷ** ಎಂತಲೂ 3 ನೆಯ ಮತ್ತು 4 ನೆಯ ಅಕ್ಷರಗಳನ್ನು **ಮೃದುವರ್ಣ** ಅಥವಾ **ಘೋಷ** ಎಂತಲೂ ಕರೆಯುತ್ತಾರೆ. ಅಂದರೆ ಕರ್ಕಶ (ಅಘೋಷ) ವರ್ಣಗಳಲ್ಲಿ ಧ್ವನಿಪಟಲ ಶಬ್ದ ಮಾಡುವುದಿಲ್ಲ. ಆದೇ ಮೃದು (ಘೋಷ) ವರ್ಣಗಳಲ್ಲಿ ಅವು ಶಬ್ದ ಮಾಡುತ್ತಿರುತ್ತವೆ. ಕೊನೆಯದನ್ನು **ಅನುನಾಸಿಕ**ವೆನ್ನುತ್ತಾರೆ. ಅದೇ ಪ್ರಕಾರ 1ನೆಯ ಮತ್ತು 3ನೆಯ ವರ್ಣಗಳು **ಅಲ್ಪಪ್ರಾಣ**ಗಳಾದರೆ 2 ನೆಯ ಮತ್ತು 4 ನೆಯ ವರ್ಣಗಳು **ಮಹಾಪ್ರಾಣ**ಗಳಾಗಿವೆ. ಅಂದರೆ ಅಲ್ಪಪ್ರಾಣಗಳ ಉಚ್ಚಾರದಲ್ಲಿ ವ್ಯಂಜನದ ನಂತರ ಹೆಚ್ಚಿನ ಉಸಿರು ಬರುವುದಿಲ್ಲ. ಆದರೆ ಮಹಾಪ್ರಾಣಗಳಲ್ಲಿ ವ್ಯಂಜನದ ನಂತರ "ಹ" ದ ರೀತಿಯ ಉಸಿರು ಹೊರಬರುತ್ತದೆ. ಹೇಗೆಂದರೆ ಕ್ + ಹ್ + ಅ ಸೇರಿ ಖ ಆಗುತ್ತದೆ. ಅದೇ ರೀತಿ ಗ್ + ಹ್ + ಅ ಸೇರಿ ಘ ಆಗುತ್ತದೆ. ಹೀಗೆಯೇ ಉಳಿದವುಗಳನ್ನೂ ತಿಳಿಯಬೇಕು.

ದೊಡ್ಡ ದೊಡ್ಡ ಶಬ್ದಗಳ ಅನುಕರಣೆ ಮಾಡುವಾಗ ಮತ್ತು ಸಂಸ್ಕೃತ ಮತ್ತು ಇತರ ಭಾಷೆಗಳಿಂದ ಕನ್ನಡಕ್ಕೆ ಎರವಲಾಗಿ ಬಂದ ಶಬ್ದಗಳನ್ನು ಉಚ್ಚರಿಸುವಾಗ ಮಹಾಪ್ರಾಣಗಳು ಬೇಕಾಗುತ್ತವೆ. ಉದಾಹರಣೆಗೆ:

ಮರ ಧೊಪ್ಪನೆ ಬಿತ್ತು.
ನದಿ ಭೋರ್ ಭೋರ್ ಎಂದು ಹರಿಯುತ್ತದೆ.

ಅಲ್ಲದೆ ಈ ಎರವಲು ಪದಗಳಲ್ಲಿ ನೋಡಿರಿ.

ಖರ್ಚು, ರಾಘವ, ಛತ್ರಿ, ಝೇಂಕಾರ, ಠಕ್ಕ
ಢಕ್ಕೆ (ಒಂದು ಚರ್ಮ ವಾದ್ಯ)
ಥಡಿ, ಧರ್ಮ, ಫಲ, ಭರ್ತಿ.

ಹ್ರಸ್ವ— ದೀರ್ಘ ಸ್ವರ ವ್ಯತ್ಯಾಸವಾದಂತೆಯೇ ಅಲ್ಪಪ್ರಾಣ ಮಹಾಪ್ರಾಣಗಳ ವ್ಯತ್ಯಾಸವೂ ಕೆಲವು ಸಲ ಅಪಾರ್ಥವನ್ನುಂಟು ಮಾಡುತ್ತದೆ.

| | |
|---|---|
| ಬರ | ಭರ |
| ಅಕಾರ | ಅಖಾರ |
| ಅದರ | ಅಧರ |
| ರಾಘವ | ರಾಗವ (ನ್ನು) |
| ಚಿನ್ನ | ಛಿನ್ನ |
| ಜರಿ | ಝರಿ |
| ತಾಟು | ಥಾಟು |

ಆದುದರಿಂದ ಉಚ್ಚಾರದಲ್ಲಿ ಮಹಾಪ್ರಾಣಗಳನ್ನು ರೂಢಿಸಿಕೊಳ್ಳುವುದೊಳಿತು. ಅಲ್ಲದೆ ನುಡಿದಂತೆ ಬರೆದುಬಿಡುವ ಸಂಭವವಿರುವುದರಿಂದ ಭಾಷಾ ಶುದ್ಧಿಯ ದೃಷ್ಟಿಯಿಂದ ಅವು ತಪ್ಪು ಎನಿಸಿಕೊಳ್ಳುತ್ತವೆ. ಆದ್ದರಿಂದ ನುಡಿಯಲ್ಲೇ ಶುದ್ಧತೆಯನ್ನು ರೂಢಿಸಿಕೊಂಡು ಬಿಟ್ಟರೆ ಈ ಗಂಡಾಂತರವಿಲ್ಲ.

ಅನುನಾಸಿಕಗಳಲ್ಲಿ ಣ, ನ, ಮ ಗಳು ಸ್ವತಂತ್ರವಾಗಿ ಬರುತ್ತವೆ. ಙ ಮತ್ತು ಞ ಗಳು ಹೀಗೆ ಸ್ವತಂತ್ರವಾಗಿ ಬರುವುದಿಲ್ಲ. ಅವು ಅನುಕ್ರಮವಾಗಿ ಕಂಠ್ಯ ಮತ್ತು ತಾಲವ್ಯ ವ್ಯಂಜನಗಳ ಮುಂದೆ ಮಾತ್ರ ಬರುತ್ತವೆ. ಹೇಗೆಂದರೆ ಅಂಕ ಎಂಬುದರ ಉಚ್ಚಾರ ಅಙ್ಕ ಎಂದೂ, ಅಂಜಿ ಎಂಬುದರ ಉಚ್ಚಾರ ಅಞ್ಜಿ ಎಂದೂ ಆಗಿದೆ. ಆದರೆ ಅವು ಇಂಥ ಸ್ಥಳದಲ್ಲಿ ಅಲ್ಲದೆ ಬೇರೆ ಎಲ್ಲೂ ಬರುವುದಿಲ್ಲ. ವಾಙ್ಮಯ, ದಿಙ್ನಾಗ ಎಂಬ ಶಬ್ದಗಳಲ್ಲಿ ಙ ವೂ, ಕಿಞ್ಞಣ್ಣ ಎಂಬ ಹೆಸರಿನಲ್ಲಿ ಞ ವೂ ಬರುತ್ತದೆ ನಿಜ. ಆದರೆ ಇಂಥ ಬೇರೆ ಶಬ್ದಗಳು ವಿರಳ.

ಅನುನಾಸಿಕಗಳು ಆಯಾ ವರ್ಗಗಳ ವ್ಯಂಜನಗಳ ಪೂರ್ವದಲ್ಲಿ ಬಂದರೆ ಅವನ್ನು ಅನುಸ್ವಾರ (ಂ) ರೂಪದಲ್ಲಿಯೇ ಬರೆಯಲಾಗುತ್ತದೆ. ಉದಾಹರಣೆಗೆ:

ಅಙ್ಕ ವನ್ನು ಅಂಕ ಎಂದೂ
ಅಙ್ಗ ವನ್ನು ಅಂಗ ಎಂದೂ
ಅಞ್ಚೆ ಯನ್ನು ಅಂಚೆ ಎಂದೂ
ಅಞ್ಜು ವನ್ನು ಅಂಜು ಎಂದೂ
ಅಣ್ಟು ವನ್ನು ಅಂಟು ಎಂದೂ
ಅಣ್ಡ ವನ್ನು ಅಂಡ ಎಂದೂ
ಅನ್ತ ವನ್ನು ಅಂತ ಎಂದೂ
ಅನ್ದ ವನ್ನು ಅಂದ ಎಂದೂ
ಕಮ್ಪು ವನ್ನು ಕಂಪು ಎಂದೂ
ಕಮ್ಬ ವನ್ನು ಕಂಬ ಎಂದೂ

ಬರೆಯುವುದೇ ರೂಢಿಯಾಗಿದೆ. ಆದರೆ ಅದೇ ಇನ್ನೊಂದು ಅನುನಾಸಿಕದೊಡನೆ ಬಂದಾಗ ಅಥವಾ ಒತ್ತಾಗಿ ಬಂದಾಗ ಮೇಲಿನಂತೆ ಬರೆಯುವುದಿಲ್ಲ.

ಉದಾಹರಣೆಗೆ: ಅಣ್ಣ ವನ್ನು ಅಂಣ ಎಂದಾಗಲಿ
ಅಮ್ಮ ವನ್ನು ಅಂಮ ಎಂದಾಗಲಿ
ಆಮ್ನಾಯ ವನ್ನು ಆಂನಾಯ ಎಂದಾಗಲಿ

ಬರೆಯುವ ರೂಢಿಯಿಲ್ಲ.

## 1.2.5 ಅವರ್ಗೀಯ ವ್ಯಂಜನಗಳು

ಒಂಬತ್ತು ಅವರ್ಗೀಯ ವ್ಯಂಜನಗಳಲ್ಲಿ ಯ ರ ಲ ವ ಳ ಗಳು ಮೃದುವರ್ಣಗಳಾದರೆ ಶ ಷ ಸ ಹ ಗಳು ಕರ್ಕಶ ವರ್ಣಗಳೆನಿಸಿಕೊಂಡಿವೆ. ಸಾಮಾನ್ಯವಾಗಿ ಉಚ್ಚಾರದಲ್ಲಿ ಶ, ಷ, ಸ, ಹ ಗಳು ತೊಂದರೆ ಕೊಡುತ್ತವೆ. ಕನ್ನಡದಲ್ಲಿ ಶ ಷ ಸ ಗಳು 'ಸ' ದಲ್ಲಿ ಸೇರಿ ಹೋಗುವುದನ್ನು ಒಂದು ಹಂತದಲ್ಲಿ ನೋಡುತ್ತೇವೆ. ಆದರೆ ಇಂದು ಕನ್ನಡದ ಶಿಷ್ಟ ರೂಪದಲ್ಲಿ ಈ ಮೂರನ್ನು ಬೇರೆ ಬೇರೆಯಾಗಿ ಉಪಯೋಗಿಸಲಾಗುತ್ತದೆ.

| | |
|---|---|
| ಶಶಿ | ಎಂಬುದು ಸಸಿ ಆಗಿ |
| ವಿಷ | ಎಂಬುದು ಇಸ ಆಗಿ |
| ವಿಶೇಷ | ಎಂಬುದು ವಿಸೇಸ ಆಗಿ |

ಇಂದೂ ಗ್ರಾಮ್ಯ ಭಾಷೆಯಲ್ಲಿ ಪ್ರಯೋಗವಾಗುತ್ತಿದೆ. ಅದೇ ಪ್ರಕಾರ 'ಹ' ವನ್ನು ಅ ಆಗಿ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಉಚ್ಚರಿಸಲಾಗುತ್ತದೆ. ಹಾಸನ ವನ್ನು 'ಆಸನ' ಎಂದು ಹೇಳುತ್ತಾರೆ. ಆದರೆ ಅದೇ ಅರಸೀಕೆರೆ ಯನ್ನು 'ಹರಸೀಕೆರೆ' ಎಂದು ಹೇಳುತ್ತಾರೆ. ಅಂದರೆ 'ಅ' ಮತ್ತು 'ಹ' ಗಳ ಉಚ್ಚಾರ ವ್ಯತ್ಯಾಸ ಆ ಜನಕ್ಕೆ ಗೊತ್ತಿಲ್ಲ ಎಂದಲ್ಲ. ಅದಲು ಬದಲು ಮಾಡುತ್ತಾರೆ. 'ಹೊಲ ಉಳುವುದು' ಎನ್ನುವುದರ ಬದಲು 'ಒಲ ಹುಳುವುದು' ಎನ್ನುತ್ತಾರೆ. ಇಂಥ ಉಚ್ಚಾರ ಭೇದಗಳೂ ಕೂಡ ಬರವಣಿಗೆಯಲ್ಲಿ ನುಸುಳಿ ಬರಲು ಸಾಕು. ಈ ರೀತಿಯ ಉಚ್ಚಾರಗಳು ಶಿಷ್ಟಕನ್ನಡ ರೂಪದಲ್ಲಿ ನುಸುಳಿಕೊಳ್ಳದಂತೆ ಎಚ್ಚರಿಕೆ ವಹಿಸುವುದು ಅಗತ್ಯವೆನಿಸುತ್ತದೆ.

## ಅಭ್ಯಾಸ - 1

(ಅ) ಕೆಳಗೆ ಕೊಟ್ಟ ಶಬ್ದಗಳನ್ನು ಸರಿಪಡಿಸಿರಿ.

ಆವಲಕ್ಕಿ ................ ನಿವರಿಸು ................ ಸಾರಕ ................ ನರಯಣ ............

ದಿಪ ................ ಧಿರ ................ ದೀವಸ ................ ಕೀರಣ ............

ಸೂಲಭ ................ ರುಪ ................ ಸೂಳ್ಳು ................ ಹಕ್ಕಿಗೂಡು ............

ಕೆಳು ................ ಕೇಸರು ................ ಬೆಡು ................ ಬೇಸುಗೆ ............

ಒದು ................ ಓಡೆ ................ ತೋಗರಿ ................ ಜೊಡು ............

(ಆ) ಕೆಳಗಿನ ಶಬ್ದಗಳಲ್ಲಿ ಸ್ವರಗಳ ಹಸ್ವ  ದೀರ್ಘ ವ್ಯತ್ಯಾಸ ಮಾಡಿ ಬೇರೆ ಶಬ್ದಗಳಾಗುವಂತೆ ಮಾಡಿರಿ.

ಹರೆ ............ ಕುಡಿ ................ ಇಡು ................ ಬಾಳೆ ............

ಕೋಳ ............ ಕಾವಿ ................ ಬೆಳೆ ................ ಭರ ............

ಬಿರಿ ............ ದನ ................ ದೀನ ................ ತೊಡು ............

(ಇ) ಕೆಳಗಿನ ಶಬ್ದಗಳನ್ನು ಸಂಧ್ಯಕ್ಷರ ಉಪಯೋಗಿಸಿ ಬರೆಯಿರಿ.

ಕಯ್ಯಾಲು ................ ಅವುದಾರ್ಯ ................ ಮಯಿಲಿಗೆ ................

ಬಯಿಗುಳು ................ ಅಯಿರಾವತ ................ ಮಯ್ಸೂರ್ ................

ಕವುಪೀನ ................ ಮವುನ ................ ರಯತ ................

ರವುದ್ರಾವತಾರ ................ ಕ್ರವರ್ಯ ................ ಗವುರವ ................

(ಈ) ಕೆಳಗಿನ ವಾಕ್ಯ ವೃಂದದಲ್ಲಿ ಅಲ್ಪಪ್ರಾಣ ಮಹಾಪ್ರಾಣ ದೋಷಗಳನ್ನು ತಿದ್ದಿರಿ:

ಭಾರತ ತುಂಭಾ ಪುರಾತನವಾದ ಧೇಶ. ಅಷ್ಟೇ ದನದಾನ್ಯಗಳಿಂದ ಸಮೃದ್ದವಾದ ನಾಡು. ಇದರಿಂದಾಗಿ ಹೊರಗಿನ ದಾಳಿಕಾರರು ಅನೇಕ ಭಾರಿ ಧಾಳಿ ಮಾಡಿದ್ದಾರೆ. ಕೊಲೆ, ಸುಲಿಗೆ ಅಲ್ಲದೇ ಅನೇಕ ಬಡ ಘಾಯಿಗಳ ಕೊನಿಯೂ ನಡೆದಿದೆ. ಗೋರಿ ಮಹಮ್ಮದ, ಗಜನಿ ಮಹಮ್ಮದ ಮೊದಲಾದವರು ಅನೇಕ ಸಲ ಧಂಡೆತ್ತಿ ಬಂದಿದ್ದಾರೆ. ಇತಿಹಾಸದಲ್ಲಿ ಅವರ ಸುದ್ಧಿ ಬೀಕರವಾಗಿದೆ.

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

(ಉ) ಅರಿ    ಹರಿ ಇಂಥ ಶಬ್ದಗಳನ್ನು ಬರೆಯಿರಿ.

... ...

... ...

... ...

... ...

(ಊ) ಕೆಳಗಿನ ಶಬ್ದಗಳನ್ನು ಶ ಷ ಸ ಗಳ ದೃಷ್ಟಿಯಿಂದ ಶಿಷ್ಟಕನ್ನಡದಲ್ಲಿ ಬರೆಯಿರಿ.

ಭಾಶೆ ..................ನಕಾಶೆ ........................ಮಾಶಾಸನ ........................

ಮೂಶಿನೋಡು ..........ಆಶನ ........................ವಿಶೇಷ ........................

ಕುಷಲ ..................ಕಶಾಯ ........................ ಕಶ್ಟ ........................

ಅಸ್ಪು ..................ನಿಶ್ಚಿಂತೆ ........................ಆಶರೆ ........................

ಷಾಹಿ ........................

(ಋ) ಕೆಳಗಿನ ವಾಕ್ಯದಲ್ಲಿ ಲ ಮತ್ತು ಳ ಗಳನ್ನು ಸರಿಯಾಗಿ ತುಂಬಿರಿ.

ಕೋಳಿನಿಂದ ಹೊಡೆ, ಕಾಲಿನಿಂದ ಕಣಜ ತುಂಬು,

ಕಾಯಿ ಬಳಿತಿತು ಬಾಲೆಗಿಡ ಹಣ್ಣು ಕೊಟ್ಟಿತು.

........................................ ........................................

........................................ ........................................

## 1.3 ಬರವಣಿಗೆ

ಕನ್ನಡ ಬರವಣಿಗೆ ಹೆಚ್ಚು ಕಡಿಮೆ ಉಚ್ಚರಿಸಿದಂತೆಯೇ ಇದೆ. ಆದುದರಿಂದಲೇ ಶುದ್ಧ ಬರವಣಿಗೆಯ ಕಡೆಗೆ ಗಮನವಿಟ್ಟಿರುವವರು ಶುದ್ಧ ಉಚ್ಚಾರಣೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಹಿಂದಿನ ಚರ್ಚೆಯಲ್ಲಿ ಬರವಣಿಗೆಯ ವಿಷಯಕ್ಕೂ ಅನೇಕ ಸಲಹೆಗಳು ಬಂದಿವೆ. ಇಲ್ಲಿ ಕೆಲವು ನಿಯಮಗಳನ್ನು, ನಡೆದು ಬಂದಿರುವ ಕಟ್ಟುನಿಟ್ಟುಗಳನ್ನು ನೋಡೋಣ.

ಬರವಣಿಗೆಯ ಕುರಿತು ಹೇಳುವಾಗ ಅಚ್ಚಿನಲ್ಲಿ ಕಾಣುವ ಆಕೃತಿಗಳಿಗೂ ಕೈಬರಹದಲ್ಲಿ ಬಳಕೆಯಾಗುವ ಆಕೃತಿಗಳಿಗೂ ಇರುವ ಸಮಾನತೆ, ವೈಷಮ್ಯಗಳನ್ನು ಹೇಳಬೇಕು. ಕೆಳಗೆ ತೋರಿಸಿದ ಹತ್ತು ಅಕ್ಷರಗಳನ್ನು ಬಿಟ್ಟರೆ ಉಳಿದೆಲ್ಲ ಅಕ್ಷರಗಳೂ ಹೆಚ್ಚು ಕಡಿಮೆ ಒಂದೇ ರೀತಿ ಇವೆ.

ಕೈ ಬರಹ: ಎ ಏ ಐ ವ ಥ ಮ ಪ ಫ ಷ ಹ

ಅಚ್ಚಿನಲ್ಲಿ: ಎ ಏ ಐ ವ ಥ ಮ ಪ ಫ ಷ ಹ

ಇತ್ತೀಚೆಗೆ ಅಚ್ಚಿನ ಮೊಳೆಗಳಲ್ಲೂ ಸುಧಾರಣೆ ಆಗಿ ಕೈಬರಹದಂತಹವೇ ಅಚ್ಚಿನ ಮೊಳೆಗಳು ಬಂದು ಬಿಟ್ಟಿವೆ. ಆದರೂ ಅನೇಕ ಪುಸ್ತಕಗಳಲ್ಲಿ ಮೇಲಿನಂತೆ ಅಚ್ಚಾದುದು ಕಂಡುಬರುತ್ತದೆ.

ಕನ್ನಡದ ಬರವಣಿಗೆ ಕ್ರಮ ತುಂಬಾ ನಿಯಮಬದ್ಧವಾಗಿದೆ. ಒಂದು ವ್ಯಂಜನವಿರಲಿ, ಅನೇಕ ವ್ಯಂಜನವಿರಲಿ, ಅವು ಸ್ವರದೊಡನೆ ಸೇರಿ ಒಂದು ಅಕ್ಷರದಲ್ಲಿ ಬರೆಯಲ್ಪಡುತ್ತವೆ. ವ್ಯಂಜನಗಳಿಗೆ ಅ, ಆ, ಇ, ಈ, ಇತ್ಯಾದಿ ಸ್ವರಗಳು ಸೇರಿ **ಕಾಗುಣಿತ**ಗಳಾಗುತ್ತವೆ.

ಉದಾಹರಣೆಗೆ:

ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ ಕೋ ಕೌ ಕಾಗುಣಿತದ ಸಂಕೇತಗಳು 'ಅ' ದ ಗುರುತು ಇರುವ ಸ್ಥಳದಲ್ಲೇ ಸೇರಿಕೊಳ್ಳುತ್ತವೆ. ಆದರೆ 'ಆ' ದ ಕಾಗುಣಿತ ಮಾತ್ರ '' ಗುರುತನ್ನು ಒಳಗೊಂಡ ಅಕ್ಷರಗಳಿಗೆ (ಅಂದರೆ ಮ, ಯ, ಝ) ಆ ಗುರುತಿನ ಮೇಲೆ ಸೇರಿಕೊಳ್ಳುತ್ತದೆ. ಹೇಗೆಂದರೆ: ಮಾ, ಯಾ, ಝಾ. ಯಾವ ಅಕ್ಷರಗಳಿಗೆ '' ಗುರುತು ಇರುವುದಿಲ್ಲವೊ ಅವುಗಳಿಗೆ ಬಲ ಮೇಲ್ಭಾಗದಲ್ಲಿ ಸೇರಿಕೊಳ್ಳುತ್ತದೆ. ಬಾ, ಟಾ, ಖಾ, ಜಾ, ಣಾ, ಲಾ, ಇದೇ ಸ್ಥಳದಲ್ಲೇ ಉಳಿದ ಕಾಗುಣಿತ ಸಂಕೇತಗಳೂ ಸೇರಿಕೊಳ್ಳುತ್ತವೆ. ವ ಕ್ಕೆ ಉ, ಊ, ಒ, ಓ, ಗಳ ಕಾಗುಣಿತಗಳು ಪಕ್ಕದಲ್ಲಿ ಸೇರಿದಾಗ 'ಮ' ದೊಡನೆ ಸಾಮ್ಯ ಬರುವುದರಿಂದ ಅವು ಕೆಳಗಿನಿಂದ ಸೇರುತ್ತವೆ. ಹೇಗೆಂದರೆ: ವು, ವೂ, ವೊ, ವೋ.

ದ್ವಿತ್ವಾಕ್ಷರಗಳನ್ನು, ಸಂಯುಕ್ತಾಕ್ಷರಗಳನ್ನೂ ಬರೆಯುವ ಪದ್ಧತಿಯೂ ಕನ್ನಡದಲ್ಲಿ ನಿಯಮಬದ್ಧವಾಗಿದೆ. ಇವು ಒಂದರ ಕೆಳಗೆ ಒಂದು ಬರೆಯಲ್ಪಡುತ್ತದೆ. ಕೆಳಗೆ ಬರೆಯಲಾಗುವ ಅಕ್ಷರಗಳನ್ನು ಉಪಾಕ್ಷರಗಳೆಂದು ಕರೆಯೋಣ. ತ, ನ, ಮ, ಯ, ರ, ಲ ಈ ಆರು ಅಕ್ಷರಗಳನ್ನುಳಿದು ಉಳಿದೆಲ್ಲ ವ್ಯಂಜನಾಕ್ಷರಗಳೂ ಉಪಾಕ್ಷರಗಳಾಗುವ ವಿಧಾನ ಎರಡೇ ಆಗಿದೆ.

(1) ಯಾವ ಅಕ್ಷರಗಳಿಗೆ '' ಗುರುತಿಸುತ್ತದೆಯೋ ಅವು ಅದನ್ನು ಕಳೆದುಕೊಂಡು ಉಪಾಕ್ಷರಗಳಾಗುತ್ತವೆ.
ಕ — ್ಕ ಗ — ್ಗ , ಚ — ್ಚ ಇತ್ಯಾದಿ (ನೋಡಿ: ಅಕ್ಕ, ಅಗ್ಗ, ಅಚ್ಚ)

(2) ಯಾವ ಅಕ್ಷರಗಳಿಗೆ ಗುರುತು ಇರುವುದಿಲ್ಲವೋ ಅವುಗಳ ಇಡೀ ರೂಪವೇ ಸಣ್ಣದಾಗಿ ಉಪಾಕ್ಷರವಾಗುತ್ತವೆ.
ಟ — ್ಟ ಣ — ್ಣ , ಜ — ್ಜ ಇತ್ಯಾದಿ (ನೋಡಿ: ಅಟ್ಟ, ಅಣ್ಣ, ಅಜ್ಜ)

ಇಲ್ಲಿ ಒಂದು ಸೂಚನೆ ಇದೆ. ಗುರುತು ಕಳೆದು ಹೋಗುವಾಗ ಅದರ ಅಡಿಯಲ್ಲಿರುವ ಬಿಂದು ಅಥವಾ ಸಣ್ಣ ಸೊನ್ನೆಯೂ ಹೊರಟು ಹೋಗುತ್ತದೆ. (ನೋಡಿ: ಫ — ್ಫ ಪ — ್ಪ ಷ — ್ಷ ಸ — ್ಸ). ಹೀಗೆ

ಆದಾಗ ಪ — ಪ್ಪ ಮತ್ತು ವ — ವ್ವ ಎರಡೂ ಒಂದೇ ಆಗಿ ಬಿಡುತ್ತವೆ. ಇದನ್ನು ತಪ್ಪಿಸಲು ವ ತನ್ನ ಗುರುತನ್ನು ಉಳಿಸಿಕೊಂಡೇ ಉಪಾಕ್ಷರವಾಗುತ್ತದೆ. (ನೋಡಿ : ಅವ್ವ)

ಮೇಲೆ ಉಳಿಸಿದ ಆರು ಅಕ್ಷರಗಳು ಕೆಳಗಿನಂತೆ ಉಪಾಕ್ಷರಗಳಾಗಲುತ್ತವೆ.
ತ — ತ್ತ, ನ — ನ್ನ ಮ — ಮ್ಮ ಯ — ಯ್ಯ ರ — ್ರ, ೯, ಲ — ಲ್ಲ (ನೋಡಿ : ಅತ್ತ ಅನ್ನ ಅಮ್ಮ ಅಯ್ಯ ಆಶ್ರಮ, ಅಲ್ಲ). ರ ಅಕ್ಷರಕ್ಕೆ ಎರಡು ಉಪಾಕ್ಷರಗಳಿರುವುದನ್ನು ಗಮನಿಸಿ. ದ್ವಿತ್ವವಾದಾಗ ಅಥವಾ ಸಂಯುಕ್ತಾಕ್ಷರದಲ್ಲಿ ರ ವು ಎರಡನೆಯ ವ್ಯಂಜನವಿದ್ದಾಗ ್ರ ಹೀಗೂ : ಸಂಯುಕ್ತಾಕ್ಷರಗಳಲ್ಲಿ 'ರ' ವು ಮೊದಲ ವ್ಯಂಜನವಿದ್ದಾಗ ಒಮ್ಮೊಮ್ಮೆ '೯' ಹೀಗೂ ಅದು ಉಪಾಕ್ಷರವಾಗುತ್ತದೆ. ಇದರ ವಿವರ ಮುಂದೆ ಬರುತ್ತದೆ.

ಸಂಯುಕ್ತಾಕ್ಷರ ಅಂದರೆ ಎರಡು ವ್ಯಂಜನಗಳ ಮೇಲೆ ಸ್ವರ ಬಂದಾಗ ಮೊದಲನೆಯ ವ್ಯಂಜನವನ್ನೂ ಸ್ವರದೊಡನೆ ಅಂದರೆ ಆಯಾ ಸ್ವರದ ಕಾಗುಣಿತದೊಡನೆ ಬರೆದು ಎರಡನೆಯ ವ್ಯಂಜನವನ್ನು ಉಪಾಕ್ಷರವನ್ನಾಗಿ ಬರೆಯುವ ನಿಯಮವಿದೆ.
ಉದಾಹರಣೆಗೆ : ಸ್ + ಕ್ + ಅ ದಲ್ಲಿ ಒಂದನೆಯ ವ್ಯಂಜನ ಸ್ ವು ಅ ಸ್ವರದ ಕಾಗುಣಿತ ಪಡೆಯುತ್ತದೆ. ಸಾ ಆಯಿತು. ಅದರ ಕೆಳಗೆ ಕ್ ದ ಉಪಾಕ್ಷರ ಸೇರುತ್ತದೆ : ಸೇರಿ, ಸಾ ಆಯಿತು. ಅದರ ಕೆಳಗೆ ಕ್ ದ ಉಪಾಕ್ಷರ ಸೇರುತ್ತದೆ : ಸ್ಕಾ. ಹೀಗೆಯೇ ಪ್ + ತ್ + ಇ. ಇಲ್ಲಿ ಪ್ + ಇ = ಪಿ, ತ್ ದ ಉಪಾಕ್ಷರ ಸೇರಿ ಪ್ತಿ.
ಒಂದಕ್ಕಿಂತ ಹೆಚ್ಚು ವ್ಯಂಜನಗಳಿದ್ದರೂ ಇದೇ ನಿಯಮಪಾಲನೆ ಆಗುತ್ತದೆ. ಉಪಾಕ್ಷರಗಳು ಅದೇ ಕ್ರಮದಲ್ಲಿ ಒಂದರ ಕೆಳಗೆ ಒಂದರಂತೆ ಬರುತ್ತವೆ. ಸ್ + ತ್ + ರ್ + ಈ = ಸ್ತ್ರೀ, ಕ್ + ತ್ + ರ್ + ಅ = ಕ್ತ್ರ ಟ್ + ತ್ + ರ್ + ಇ = ಟ್ತ್ರಿ

'ರ' ಕಾರವು ಸಂಯುಕ್ತಾಕ್ಷರಗಳಲ್ಲಿ ಎರಡನೆಯದಾಗಿದ್ದಾಗ ಎಲ್ಲ ಅಕ್ಷರಗಳಂತೆ ನಿಯಮ ಪಾಲಿಸುತ್ತದೆ. ಆದರೆ ಅದು ಒಂದನೆಯದಾಗಿದ್ದರೆ ಅದಕ್ಕೆ ಎರಡು ವಿಧಾನಗಳಲ್ಲಿ ಉಪಾಕ್ಷರವಾಗುತ್ತದೆ. ಒಂದು ವಿಧಾನ ಮೇಲೆ ಹೇಳಿದ ನಿಯಮಕ್ಕನುಗುಣವಾಗಿಯೇ ಇದೆ. ಹೇಗೆಂದರೆ ರ್ + ಯ್ + ಓ = ರ್ಯೋ, ರ್ + ತ್ + ಅ = ರ್ತಾ ಎರಡನೆಯ ವಿಧಾನದಲ್ಲಿ 'ರ್' ದ ನಂತರದ ವ್ಯಂಜನ ಸ್ವರದ ಕಾಗುಣಿತ ಹೊಂದಿ 'ರ್' ವು '೯' ಆಗಿ ಕೊನೆಯಲ್ಲಿ ಸೇರಿಕೊಳ್ಳುತ್ತದೆ. ರ್ + ಯ್ + ಓ. ಇಲ್ಲಿ 'ರ' ದ ನಂತರದ 'ಯ್' ವು ಸ್ವರದ ಕಾಗುಣಿತ ಪಡೆದು 'ಯೋ' ಆಗಿ ನಂತರದ '೯' ಬರುತ್ತದೆ. ಹೀಗೆ ಯೋ೯. ರ್ + ತ್ + ಅ ದಲ್ಲಿ 'ತಾ' ದ ನಂತರದ '೯' = ತಾ೯, ರ್ + ಕ್ + ಏ = ಕೇ೯, ರ್ + ಕ್ + ಓ = ಕೋ೯. ಹೀಗೆ ಏ, ಓ ಗಳ ಕಾಗುಣಿತ ಸೇರಿದಾಗ ದೀರ್ಘದ ಗುರುತಾದ 'ೀ' ಪೂರ್ವದಲ್ಲಿಯೂ "೯" ಗುರುತನ್ನು ಸೇರಿಸಲಾಗುತ್ತದೆ. ಹೇಗೆಂದರೆ : ಕೇ೯, ಯೋ೯, ಕೋ೯ ಹೀಗೆ. ಆದರೆ ನಿಯಮಾನುಸಾರ ದೀರ್ಘದ ಗುರುತಿನ ನಂತರವೇ ಅರ್ಕಾವಳಿ ಅಂದರೆ '೯' ಗುರುತು ಬರೆಯುವುದು ಸಾಧುವಾದುದು.

## ಅಭ್ಯಾಸ - 2

**(ಅ) ಕೆಳಗಿನವುಗಳನ್ನು ಕಾಗುಣಿತದೊಡನೆ ಬರೆಯಿರಿ.**

ಮ್ + ಔ = ............ಯ್ + ಇ = ..................ಲ್ + ಊ = ......................
ಜ್ + ಐ = ............ಭ್ + ಐ = ..................ಣ + ಇ = ......................
ಖ್ + ಆ = .............ಬ + ಏ = ...................ವ್ + ಓ = ......................
ಛ್ + ಊ = ............ಶ್ + ಊ = ..................ಯ್ + ಊ = ......................

**(ಆ) ದಪ್ಪಕ್ಷರಗಳ ದ್ವಿತ್ವ ಅಕ್ಷರಗಳಾಗಿ ಬರೆಯಿರಿ —ಅರ್ಥ, ವ್ಯತ್ಯಾಸವನ್ನು ಗಮನಿಸಿರಿ.**

ಕತೆ ......................ಮುದಿ ..............................ಮಗ ............................
ಪಟ ......................ಅಡ ...............................ಬಡಿ ............................
ಕಣಿ ......................ಕೊಳ ..............................ಮಲ ............................
ಅವ ......................ಬಳಿ ...............................ಅದು ............................

**(ಇ) ಕೆಳಗಿನ ಅಕ್ಷರಗಳನ್ನು ದ್ವಿತ್ವವಾಗಿ ಬರೆಯಿರಿ.**

ಮ ............ನ ........................ಣ ......................ಟ ......................
ಬ ............ಭ ........................ಯ ......................ರ ......................
ಸ ............ಪ ........................ಲ ......................ತ ......................
ಖ ............ಚ ........................ಝ ......................ಢ ......................

**(ಈ) ಕೆಳಗಿನ ಅಕ್ಷರಗಳನ್ನು ಸಂಯುಕ್ತಾಕ್ಷರಗಳಾಗಿ ಬರೆಯಿರಿ.**

ಕ್ + ತ್ + ಇ ....... ,ದ್ + ರ್ + ಎ ............ ,ತ್ + ಕ್ + ಅ ....................
ಸ್ + ತ್ + ರ್ ....... ,ಶ್ + ತ್ + ಇ .............,ಮ್ + ರ್ .....................
ಕ್ + ಲ್ + ಅ ....... ,ತ್ + ಯ್ + ಅ ............ ,ತ್ + ಮ್ + ಅ ....................
ರ್ + ಯ್ + ಅ ....... ,ಅಥವಾ ...................... ,
ರ್ + ತ್ + ರ್ + ಅ . ,ಅಥವಾ .. ................. ,

(ಉ) ಕೆಳಗಿನ ಸಂಯುಕ್ತಾಕ್ಷರದಲ್ಲಿ ಅಡಕವಾದ ಅಕ್ಷರಗಳನ್ನು ಬರೆಯಿರಿ.

ಕ್ತ್ರ + + + ........................, ಸ್ಯು + + ........................ , ........................

ಗ್ಘ್ + + + ........................ ಷ್ಟಿ + + ........................

ನ್ವ್ + + + ........................ ಷ್ಟಿ + + ........................

ರ್ದ್ + + + ........................ ಥ್ದಿ + + + ........................

(ಊ) ಕೆಳಗಿನ ರ್ ಯುಕ್ತಾ ಪದಗಳನ್ನು ಸರಿಪಡಿಸಿರಿ.

ಪೂರ್ವ ....... ತೀರ್ವ ....... ತಕ್ರ ....... ಆಗರ್ಾಸನ .......

## 1.4 ಉಚ್ಚಾರಣೆ ಹಾಗೂ ಬರವಣಿಗೆ

ಕನ್ನಡದಲ್ಲಿ ಹೆಚ್ಚು ಕಡಿಮೆ ಉಚ್ಚರಿಸಿದಂತೆಯೇ ಬರವಣಿಗೆ ಇದೆ ಎಂದು ಹೇಳಲಾಗಿದೆ. ನಿಜ. ಆದರೂ ಕೆಲವೆಡೆ ವ್ಯತ್ಯಾಸಗಳು ಕಂಡುಬರುತ್ತವೆ. ಇಂಥ ಸಂದರ್ಭದಲ್ಲಿ ಉಚ್ಚಾರ ಪ್ರಧಾನವಲ್ಲ; ಹಿಂದಿನಿಂದಲೂ ಬಂದ ಬರವಣಿಗೆಗೆ ಪ್ರಾಧಾನ್ಯವಿದೆ. ಉದಾಹರಣೆಗೆ : 'ಮಧ್ಯಾನ್ಹ' ಎಂದು ಉಚ್ಚರಿಸಿದರೂ ಬರೆಯುವುದು 'ಮಧ್ಯಾಹ್ನ' ಎಂದು. ಅದೇ ರೀತಿ ಬ್ರಾಮ್ಹಣ ಎಂದು ಉಚ್ಚರಿಸಿದರೂ ಬ್ರಾಹ್ಮಣ. ಇದೇ ರೀತಿ 'ಹ' ಕಾರದೊಡನೆ ಸಂಯುಕ್ತವಾದ ಇತರ ವ್ಯಂಜನಗಳನ್ನೂ ತಿಳಿಯಬೇಕು. ಬಾಲ್ಹಿಕ ಎಂದು ಹೇಳಿದರೂ ಬರವಣಿಗೆ ಬಾಹ್ಲಿಕ ಎಂದೇ: ಆನ್ಹಿಕ ಎಂದರೂ ಬರೆಹ ಆಹ್ನಿಕ ಎಂದೇ. ಅಪರಾನ್ಹ ಎಂದರೂ ಅಪರಾಹ್ನ ಎಂದೇ ಬರೆಯಬೇಕು.

ಈ ರೀತಿಯ ಉಚ್ಚಾರ ವ್ಯತ್ಯಾಸ ಅಸಹ್ಯದಲ್ಲೂ ಕಂಡು ಬರುತ್ತದೆ. ಈ ಶಬ್ದವನ್ನು ಅನೇಕರು ಅಸಯ್ಹ ಎಂದು ಹೇಳುತ್ತಾರೆ.

ವಿಸರ್ಗವನ್ನು ಕುರಿತು ಕೆಲವು ವಿಚಾರಗಳು ಕುತೂಹಲಕರವಾಗಿವೆ. ಇದು ಸಂಸ್ಕೃತದಿಂದ ಎರವಲು ಬಂದ ಪದಗಳಲ್ಲಿ ಹೆಚ್ಚಾಗಿ ಕಾಣುತ್ತದೆ. ಉದಾಹರಣೆಗೆ ಪುನ:, ದೇವಾ:, ಗತಿ:, ಗುರು:, ಕವೇ:,ಗುರೋ: ಈ ಮೊದಲಾದ ಸಂಸ್ಕೃತ ಪದಗಳ ಉಚ್ಚಾರ ಕರ್ನಾಟಕ, ಮಹಾರಾಷ್ಟ್ರ ಮತ್ತಿತರ ಭಾಗಗಳಲ್ಲಿ ಮೂರು ಅಕ್ಷರಗಳಂತೆ ಆಗುತ್ತದೆ. ಅಂದರೆ ಪುನಹ, ದೇವಾಹಾ, ಗತಿಹಿ, ಗುರುಹು, ಕವೇಹೇ, ಗುರೋಹೋ. ಹೀಗೆ — ವಿಸರ್ಗವನ್ನು ಹಕಾರಕ್ಕೆ ಹಿಂದಿನ ಅಕ್ಷರದಲ್ಲಿ ಇರುವ ಸ್ವರವನ್ನೇ ಸೇರಿಸಿ ಮೂರನೆಯ ಅಕ್ಷರ ಮಾಡಿ ಹೇಳುವ ರೂಢಿ ಇದೆ. ಆದರೂ ಬರೆಯುವುದು ವಿಸರ್ಗವನ್ನೇ ಸಂಸ್ಕೃತದಿಂದ ಕೆಲವೊಮ್ಮೆ ಉದ್ಧರಣೆಗಳನ್ನು ಕನ್ನಡದಲ್ಲಿ ಕೊಡುತ್ತಾರೆ. ಆಗ ಇಂಥ ಸನ್ನಿವೇಶಗಳು ಬರುತ್ತವೆ. ನಿಜವಾಗಿ ಪುನಹ್, ದೇವಾಹ್, ಗತಿಹ್, ಹೀಗೆ ಉಚ್ಚರಿಸಬೇಕು. ಆದರೆ ನಡೆದು ಬಂದ ಪದ್ಧತಿ ಹಾಗಿಲ್ಲ. ಕನ್ನಡದಲ್ಲಿ ಆ:, ಚಿ: ಉ:, ಥೂ:, ಫು: ಮುಂತಾದ ನಿಪಾತಗಳಲ್ಲಿ ವಿಸರ್ಗದ ಬಳಕೆ ಆಗುತ್ತದೆ. ಆದರೆ ಅಲ್ಲಿ ಅದೇ ರೀತಿ, ಅಂದರೆ ಚಿಹಿ ..... ಇತ್ಯಾದಿ ಉಚ್ಚಾರಣೆ ಆಗುತ್ತದೆ. ಬರವಣಿಗೆಯಲ್ಲಿ ವಿಸರ್ಗವೇ ಸಾಧುವೆನಿಸಿದೆ.

'ಕ' ಕಾರ ಪೂರ್ವದ ವಿಸರ್ಗವನ್ನು ಜಿಹ್ವಾ ಮೂಲೀಯ ಎಂದೂ, 'ಪ' ಕಾರ ಪೂರ್ವದ ವಿಸರ್ಗವನ್ನು ಉಪಧ್ಮಾನೀಯ ಎಂದೂ ಕರೆಯಲಾಗುತ್ತದೆ. ಅಂತ:ಕರಣ, ಅಂತ:ಪುರ ಇಲ್ಲಿ ಮೊದಲಿನದು ಜಿಹ್ವಾಮೂಲೀಯ, ಎರಡನೆಯದು ಉಪಾಧ್ಮಾನೀಯ. ಇವುಗಳ ಉಚ್ಚಾರ ಮರೆಯಾಗುತ್ತ ಬಂದಿದೆ. ಅಂತಕ್ಕರಣ, ಅಂತಪ್ಪುರ ಹೀಗೆ ಉಚ್ಚರಿಸುವುದು ಪ್ರಚುರವಾಗುತ್ತಿದೆ. ಆದರೆ ಬರವಣಿಗೆ ಮಾತ್ರ ವಿಸರ್ಗ ಸಹಿತವಾಗಿಯೇ ಉಳಿದಿದೆ. ಸಂಸ್ಕೃತದಿಂದ ಎರವಲು ಬಂದ ಪದಗಳನ್ನು ಉಚ್ಚರಿಸುವ ವಿಶಿಷ್ಟ ರೀತಿಯಂತೆ ಇಂಗ್ಲೀಷ್ ಮತ್ತು ಹಿಂದಿ — ಉರ್ದುಗಳಿಂದ ಎರವಲುಬಂದ ಪದಗಳ ಉಚ್ಚಾರವನ್ನೂ ತಿಳಿದುಕೊಳ್ಳೋಣ.

ಇಂಗ್ಲೀಷ್‌ನಲ್ಲಿಯ ಸಂಧ್ಯಕ್ಷರಗಳನ್ನು ಕನ್ನಡದಲ್ಲಿ ಸರಳಗೊಳಿಸಲಾಗುತ್ತದೆ. ಉದಾಹರಣೆಗೆ: ರೆಯಿಲ್ ವೇ ರೇಲ್ ವೇ ಆಗಿ, ಮೆಯಿಲ್ ಮೇಲ್ ಆಗಿ ಕನ್ನಡೀಕರಿಸಲಾಗುತ್ತದೆ. ಕೆಲವು ಪ್ರದೇಶಗಳಲ್ಲಿ ರೈಲು, ಮೈಲು, ಎಂದೂ ಮಾಡುತ್ತಾರೆ.

### ಅಭ್ಯಾಸ - 3

(ಅ) ಕೆಳಗಿನ ಶಬ್ದಗಳಲ್ಲಿ ಕಂಡುಬರುವ ಬರವಣಿಗೆ ಭೇದಗಳ ಶಿಷ್ಟರೂಪಗಳನ್ನು ತಿಳಿಸಿರಿ.

ಅಲ್ಹಾದ ....................ವಿಸ್ಲೇಷಣೆ ....................ಭಂಗಾರ ....................

ಭೂಶಣ ....................ಪ್ರಲ್ಹಾದ ....................ಪ್ರಸಿದ್ಧಿ ....................

ಗೌತಮ ಬುಧ ..........ಅಂತಕ್ಕಲಹ ....................

ಜಿವ್ಹೆ ....................ಪುನಪ್ಪುನ: ....................

ಬಾಯ್ಯ (ಹೊರಗಿನ) ......ಪುನಹ ....................ಆನ್ಹಿಕ ....................

ಬ್ರಮ್ಹ ....................ಸುಧ್ಧಿ ....................ವಿದ್ದೆ ....................

ಅಂಸ ....................ತಂಪು ....................ಎಂಣೆ .......... ..........

## 1.5 ಸಾರಾಂಶ

ಈ ಅಂಶದಲ್ಲಿ ಕನ್ನಡ ವರ್ಣಗಳನ್ನು ಚರ್ಚಿಸಿದ್ದೇವೆ. ಸ್ವರಗಳು ಮತ್ತು ವ್ಯಂಜನಗಳು ಸೇರಿ ವರ್ಣಮಾಲೆಯಾಗಿದೆ ಎಂದು ತಿಳಿದುಕೊಂಡೆವು. ಸ್ವರಗಳು, ಸಂಧ್ಯಕ್ಷರಗಳು ಮತ್ತು ವ್ಯಂಜನಗಳ ಬಗ್ಗೆ ಚರ್ಚಿಸಿದೆವು. ವ್ಯಂಜನಗಳಲ್ಲಿ ವರ್ಗೀಯ ಮತ್ತು ಅವರ್ಗೀಯ ಎಂಬ ಎರಡು ವಿಧಗಳೆಂಬುದನ್ನು ಗುರುತಿಸಿದೆವು. ಹ್ರಸ್ವ — ದೀರ್ಘ ಸ್ವರ ವ್ಯತ್ಯಾಸದಂತೆಯೇ ಅಲ್ಪಪ್ರಾಣ ಮಹಾಪ್ರಾಣಗಳ ವ್ಯತ್ಯಾಸವು ಬೇರೆಯೇ ಅರ್ಥ ಕೊಡುವುದೆಂದು ತಿಳಿದುಕೊಂಡೆವು. ಅನುಸ್ವಾರ, ವಿಸರ್ಗಗಳ ಬಳಕೆಯನ್ನು ಅರಿತೆವು. ಬರವಣಿಗೆ, ಮತ್ತು ಉಚ್ಚಾರಣೆ ಇವುಗಳ ಪರಸ್ಪರ ಸಂಬಂಧವನ್ನು ನೋಡಿದೆವು. ಬರವಣಿಗೆಯ ತತ್ವಗಳನ್ನು ವಿಸ್ತಾರವಾಗಿ ಚರ್ಚಿಸಿದೆವು. ಕೆಲವೊಂದು ಸಲ ಉಚ್ಚಾರಣೆ ಮತ್ತು ಬರವಣಿಗೆ ಹೇಗೆ ಭಿನ್ನವಾಗಿರುತ್ತದೆ ಎಂಬುದನ್ನು ತಿಳಿದುಕೊಂಡೆವು. ಈ ಅಂಶವನ್ನು ಅಭ್ಯಾಸ ಮಾಡಿದ ನಂತರ ನೀವು ತಪ್ಪಿಲ್ಲದೆ ಉಚ್ಚಾರಣೆ ಮತ್ತು ಬರವಣಿಗೆಯನ್ನು ರೂಢಿಸಿಕೊಳ್ಳುತ್ತೀರಿ.

ಎರಡು ಪದಗಳನ್ನು ಎಡೆಬಿಡದೆ ಉಚ್ಚರಿಸಿದಾಗ ವರ್ಣಗಳಲ್ಲಿ ಕೆಲವು ಬದಲಾವಣೆಗಳು ಕಂಡುಬರುತ್ತವೆ. ಇದನ್ನು ನಮ್ಮ ಎರಡನೇ ಅಂಶವಾದ 'ಸಂಧಿ ಮತ್ತು ಸಮಾಸ' ದಲ್ಲಿ ಚರ್ಚಿಸೋಣ.

## ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

| | | | | |
|---|---|---|---|---|
| (ಅ) | ಅವಲಕ್ಕಿ | ನಿವಾರಿಸು | ನರಕ | ನಾರಾಯಣ |
| | ದೀಪ | ಧೀರ | ದಿವಸ | ಕಿರಣ |
| | ಸುಲಭ | ರೂಪ | ಸುಳ್ಳು | ಹಕ್ಕಿಗೂಡು |
| | ಕೇಳು | ಕೆಸರು | ಬೇಡು | ಬೆಸುಗೆ |
| | ಓದು | ಒಡೆ | ತೊಗರಿ | ಜೋಡು |
| ಆ) | ಹಾರೆ | ಕೂಡಿ | ಈಡು | ಬಳೆ |
| | ಕೊಳ | ಕವಿ | ಬೇಳೆ | ಭಾರ |
| | ಬೀರಿ | ದಾನ | ದಿನ | ತೋಡು |
| (ಇ) | ಕೈಕಾಲು | ಔದಾರ್ಯ | ಮೈಲಿಗೆ | |
| | ಬೈಗುಳು | ಐರಾವತ | ಮೈಮರೆ | |
| | ಕೌಪೀನ | ಮೌನ | ರೈತ | |
| | ಶೌದ್ರಾವತಾರ | ಕೌರ್ಯ / ಕೌರ್ಯ | ಗೌರವ | |

(ಈ) ಭಾರತ ತುಂಬಾ ಪುರಾತನ ದೇಶ. ಅಷ್ಟೇ ಧನಧಾನ್ಯಗಳಿಂದ ಸಮೃದ್ಧವಾದ ನಾಡು. ಇದರಿಂದಾಗಿ ಹೊರಗಿನ ಧಾಳಿಕಾರರು ಅನೇಕ ಬಾರಿ ಧಾಳಿ ಮಾಡಿದ್ದಾರೆ. ಕೊಲೆ, ಸುಲಿಗೆ ಅಲ್ಲದೆ ಅನೇಕ ಬಡಪಾಯಿಗಳ ಖೂನಿಯೂ ನಡೆದಿದೆ. ಘೋರಿ ಮಹಮ್ಮದ, ಘಜನಿ ಮಹಮ್ಮದ ಮೊದಲಾದವರು ಅನೇಕ ಸಲ ದಂಡೆತ್ತಿ ಬಂದಿದ್ದಾರೆ. ಇತಿಹಾಸದಲ್ಲೇ ಅವರ ಸುದ್ದಿ ಭೀಕರವಾಗಿದೆ.

| | | |
|---|---|---|
| (ಉ) | ಆಲ | ಹಾಲ (ನು) |
| | ಇಂದು | ಹಿಂದು |
| | ಊಡು | ಹೂಡು |
| | ಅವಳ | ಹವಳ |

| | | | |
|---|---|---|---|
| (ಊ) | ಭಾಷೆ | ನಕಾಶೆ | ಮಾಶಾಸನ |
| | ಮೂಸಿನೋಡು | ಆಸನ | ವಿಶೇಷ |
| | ಕುಶಲ | ಕಷಾಯ | ಕಷ್ಟ |
| | ಅಷ್ಟು | ನಿಶ್ಚಿಂತೆ | ಆಸರೆ |
| | | | ಶಾಹಿ |

(ಋ) ಕೋಲಿನಿಂದ ಹೊಡೆ, ಕಾಳಿನಿಂದ ಕಣಜ ತುಂಬು,
ಕಾಯಿ ಬಲಿತಿತು, ಬಾಳೆಗಿಡ ಹಣ್ಣು ಕೊಟ್ಟಿತು.

ಅಭ್ಯಾಸ - 2

| | | | | |
|---|---|---|---|---|
| (ಅ) | ಮೌ | ಯಿ | ಲೂ | |
| | ಜು | ಭ್ರ | ಣೆ | |
| | ಖ | ಬೇ | ವೋ | |
| | ಥೂ | ಖೂ | ಯೂ | |
| (ಆ) | ಕತ್ತೆ | ಮುದ್ದಿ | ಮಗ್ಗ | |
| | ಪಟ್ಟ | ಅಡ್ಡ | ಬಡ್ಡಿ | |
| | ಕಣ್ಣಿ | ಕೊಳ್ಳ | ಮಲ್ಲ | |
| | ಅಪ್ಪ | ಬಳ್ಳಿ | ಅದ್ದು | |
| (ಇ) | ಮ್ಮ | ನ್ನ | ಣ್ಣ | ಟ್ಟ |
| | ಬ್ಬ | ಛ್ಛ | ಯ್ಯ | ರ್ರ |
| | ಸ್ಸ | ಪ್ಪ | ಲ್ಲ | ತ್ತ |
| | ಖ್ಖ | ಜ್ಜ | ಝ್ಝ | ಢ್ಢ |
| (ಈ) | ಕ್ತ | ದ್ರ | ತ್ಕ | |
| | | ಶ್ರಿ | ಮ್ರ | |
| | ಕ್ಷ | ತ್ಯ | ತ್ಮ | ರ್‍ಯ ಅಥವಾ ರ್ಯ |
| | | | | ತ್ರ ಅಥವಾ ರ್ತ್ರ |
| (ಉ) | ಕ್ + ತ್ + ರ್ + ಅ | ಸ್ + ಯ್ + ಉ | | |
| | ಗ್ + ಝ್ + ಅ | ದ + ವ್ + ಆ | | |
| | ನ್ + ವ್ + ಏ | ಹ್ + ತ್ + ಇ | | |
| | ರ್ + ದ್ + ರ್ + ಅ | ಸ್ + ಥ್ + ಇ | | |
| (ಊ) | ಪೂರ್ವ | ತೀವ್ರ | | |
| | ತರ್ಕ | ಅಗ್ರಾಸನ | | |

ಅಭ್ಯಾಸ - 3 ಉತ್ತರ

| | | | |
|---|---|---|---|
| ಆಹ್ಲಾದ | ವಿಶ್ಲೇಷಣೆ | ಬಂಗಾರ | |
| ಭೂಷಣ | ಪ್ರಹ್ಲಾದ | ಪ್ರಸಿದ್ಧಿ | |
| ಗೌತಮಬುದ್ಧ | ಅಂತ:ಕಲಹ | ಜಿಹ್ವೆ | |
| ಪುನ:ಪುನ: | ಬಾಹ್ಯ | ಪುನ: | ಆಹ್ನಿಕ |
| ಬ್ರಹ್ಮ | ಸುದ್ದಿ | ವಿದ್ಯೆ | |
| ಅನ್ನ | ತಮ್ಮ | ಎಣ್ಣೆ | |